
ನೋಡ್ತಾರೆ? ಸಾವಿರಾರು ಕನಸುಗಳೊಂದಿಗೆ ಉದಯ ಸೂರ್ಯನಂತೆ ಪ್ರಜ್ವಲಿಸುತ್ತ ಮನೆಗೆ - ಊರಿಗೇ ಬೆಳಕಾಗಿದ್ದ, ಪೂರ್ಣಪ್ರಮಾಣದಲ್ಲಿ ಕ್ರೀಡಾಲೋಕದಲ್ಲಿ ಸ್ಟಾರಾಗುತ್ತ ಬಂದಿದ್ದ ಹುಡುಗ, ಈಗ ಆಗಸದ ನಕ್ಷತ್ರವಾಗಿ ಹೋದ ಅನ್ನುವ ಭಯಾನಕ ವಾಸ್ತವವನ್ನು ಹೇಗೆ ಅಂಗೀಕರಿಸಬಹುದು? ಮಕ್ಕಳ ವಿಚಾರದಲ್ಲಿ ಎಂದೂ ಯಾರಿಗೂ ಆಗಬಾರದ, ಬರಬಾರದ ಈ ಅನುಭವವನ್ನು ಅರಗಿಸಿಕೊಳ್ಳಲು ಮನುಷ್ಯಮನಸ್ಸಿನಲ್ಲಿ ಅದಾವ ಅಬ್ ಸರ್ವರ್ ಅಳವಡಿಸಿದೆ?

ಒಟ್ಟು ಒತ್ತಡಗಳೊಂದಿಗೇ ಹಲವಾರು ಹೆಜ್ಜೆಗಳು ಅಂಗಳದ ಉದ್ದಗಲಗಳಲ್ಲಿ ಹರಿದು ಪಸರಿಸುತ್ತಿದ್ದವು. ಸಣ್ಣ ಸಣ್ಣ ಗುಂಪುಗಳಾಗಿ ಮರಗಳ ಅಡಿಯಲ್ಲಿ ನಿಂತು ಮಾತಾಡುವಂತಿದ್ದ ಮಂದಿ ದನಿಯೇ ಹೊರಡದ ಗಂಟಲುಗಳಲ್ಲಿ ಗದ್ಗದರಾಗಿದ್ದರು. ನಾಲ್ಕಾರು ಜನ ಬಂದು ತುಸು ದೂರದಲ್ಲಿದ್ದ ಗೇಟಿನತನಕವೂ ವಯರುಗಳನ್ನೆಳೆದು ಅಲ್ಲಲ್ಲಿ ಲೈಟಿನ ವ್ಯವಸ್ಥೆಗೆ ತೊಡಗಿದ್ದರು. ಹೊರಗೆ ಮುಖ್ಯರಸ್ತೆಯ ಉದ್ದಕ್ಕೂ ಸಿಕ್ಕಿದ ಅಗಲಗಳನ್ನೂ ಬಳಸಿಕೊಂಡು ಸಾಲು ಸಾಲು ವಾಹನಗಳು ಈಗಾಗಲೇ ನಿಂತುಬಿಟ್ಟಿದ್ದವು. ಎಲ್ಲದರ ಮೇಲೂ ಗಾಢವಾಗಿ ವ್ಯಾಪಿಸಿ ನಿಂತ ಮೌನವಿತ್ತು. ಮರ್ಮಾಘಾತದಲ್ಲಿ ಮರಗಟ್ಟಿ ಮಂಕಾದ ಮನಸ್ಸಿಗೆ, ಮಂಜು ಮುಸುಕಿದಂತೆ ಮಬ್ಬಾಗಿ ಅಲ್ಲಿಗೇ ಉರಿಯುತ್ತಿದ್ದ ಕಣ್ಣುಗಳಿಗೆ ಹೊರಗಿನ ಒಂದೊಂದೇ ವಿವರಗಳು ಗೋಚರಿಸತೊಡಗಿದವು. ಇನ್ನಿಲ್ಲವಾದ ವಿನ್ಯಾಸನ ಅಂತಿಮಯಾತ್ರೆಯ ತಯಾರಿಗಳು ಇಲ್ಲೀಗ ನಡೀತಾ ಇವೆ. ವಂಶದ ಕುಡಿ ಎಂದು ಇದುವರೆಗೆ ಅಪಾರ ಆಸ್ಥೆಗಳೊಂದಿಗೆ ಪೋಷಿಸಿ ಬೆಳೆಸಿದ ತಂದೆ-ತಾಯಿ, ನಿರ್ಜೀವ ಶರೀರದೊಂದಿಗೆ ಅಲ್ಲಿಂದ ಹೊರಟು ಬರುತ್ತಾರೆ. ಈ ಅನಿರೀಕ್ಷಿತಕ್ಕೆ ತತ್ತರಿಸಿದ ಊರ ಮಂದಿಯೆಲ್ಲ ತಮ್ಮ ದುಃಖ ದಿಗಿಲುಗಳನ್ನು ಹಸಿಯಾಗಿ ಹಿಡಿದಿಟ್ಟು ಓಡಿ ಬಂದಿದ್ದಾರೆ. ದೂರದವರೂ ಬಹಳವಾಗಿ ಬರ್ತಾ ಇದ್ದಾರೆ. ಎಲ್ಲರೂ ತಮ್ಮದೇ ಬಾಧ್ಯತೆಗಳೊಂದಿಗೆ ಮುಂದಿನ ವ್ಯವಸ್ಥೆಯ ಅನಿವಾರ್ಯಗಳಲ್ಲಿ ಓಡಾಡುತ್ತ ದುಗುಡಗಳನ್ನು ವಿನಿಮಯಗೊಳಿಸಿ ಅನುಭವಿಸುತ್ತಿದ್ದಾರೆ. ಕಂಡಾಗ ಪುರೋಹಿತರಂತಿರುವ ನಾಲ್ಕು ಮಂದಿ ಬಾಳೆ, ಬಿದಿರು, ಅಕ್ಕಿ, ತೆಂಗಿನಕಾಯಿ, ಹೊಸಬಟ್ಟೆ, ಮಡಿಕೆ,



ಕುಡಿಕೆ ಎಂದು ವಿಚಾರಿಸುತ್ತ ವ್ಯಸ್ತ ತತ್ಪರತೆಯಲ್ಲಿದ್ದಾರೆ. ಅವರಲ್ಲಿಬ್ಬರು ವಿನ್ಯಾಸನೊಂದಿಗೆ ವೇದಪಾಠಕ್ಕೆ ಬರುತ್ತಿದ್ದ ಹುಡುಗರು ಎಂದು ಗುರುತಿಸಿದಾಗ ಮೈಯೆಲ್ಲ ಮುಳ್ಳಾಯ್ತು! ಮತ್ತೆ ಮತ್ತೆ ಒದ್ದೆಯಾಗುವ ಅವರ ಕಣ್ಣುಗಳನ್ನು ಒರಸುತ್ತ ಹೆಗಲಮೇಲಿನ ಬೈರಾಸುಗಳು ಮುದ್ದೆಯಾಗುತ್ತಿದ್ದವು. ಯಾರೋ ಕೈಹಿಡಿದು ಎಬ್ಬಿಸಿ ನಡೆಸುತ್ತಿದ್ದರು. ಓಲಾಡುತ್ತ ಮುಗ್ಗರಿಸುತ್ತ ಮನೆಯೊಳಗೆ ಬಂದೆ. ಅದಾಗಲೇ ತುಂಬಿ ಹೋಗಿತ್ತು ಮನೆ. ಒಂದೇ ಮುಖವಾಡದ ಅಸಂಖ್ಯ ಅಕೃತಿಗಳು ಸುತ್ತುವರಿದು ಎಳೆಯುತ್ತಿರುವಂತಾಯ್ತು. ಮತ್ತೆ ತಲೆ ಸುತ್ತಿ ಬಂದು ಮೂಲೆಗೊರಗಿ ಅಲ್ಲೇ ಕುಸಿದು ಕುಳಿತೆ. 'ಪೋಸ್ಟ್ ಮಾರ್ಟಂ ಮುಗಿಸಿ ಬರುವುದು, ತುಂಬ ತಡವಾದೀತು' ಅಂತ ಯಾರೋ ಹೇಳುತ್ತಿದ್ದರು. ಮತ್ತಷ್ಟು ಹೊತ್ತಿನಲ್ಲಿ ಹೊಸದೊಂದು ವಾರ್ತೆ ಸುತ್ತಲೂ ಪಿಸುಮಾತಿನಲ್ಲಿ ಹರಿದಾಡತೊಡಗಿತು. 'ಕಣ್ಣು ದಾನಮಾಡಿದ್ರಂತೆ. ಅಂಗದಾನ-ಮತ್ತೇನೇನೋ ಕೊಟ್ಟು ಬರ್ತಾರಂತೆ...' ಹಾಗಾದರೆ ನನ್ನ ವಿನ್ಯಾಸನ ಅಂತ್ಯವಲ್ಲ - ಇದು ಆರಂಭ!

ನನ್ನ - ವಿನೂನ ಬಂಧ ತೊಡಗಿದ ಗಳಿಗೆ ಕಣ್ಮುಂದೆ ಬಂದು ನಿಂತಿತು. ಹಿಂದಿನ ದಿನವಷ್ಟೆ ಈ ಮನೆ ಪಕ್ಕದ ಆ ಪುಟ್ಟ ಔಟ್ ಹೌಸನ್ನು ನನ್ನ ವಸತಿಗಾಗಿ ವ್ಯವಸ್ಥೆ ಮಾಡಿ ಬಿಟ್ಟುಕೊಟ್ಟಿದ್ದರು. ಜತೆಗೆ ತಂದಿದ್ದ ಒಂದಿಷ್ಟು ವಸ್ತುಗಳು ವ್ಯತ್ಯಸ್ತ ಸ್ಥಿತಿಯಲ್ಲಿ ಹಾಗೇ ಕಾದಿದ್ದುವು. ಐದಾರು ವರ್ಷದ ಮುದ್ದು ಮುಖದ ತುಂಟ ಹುಡುಗ ಮೆಟ್ಟಿಲುಗಳಲ್ಲೆ ಓಡಿ ಬಂದು ನನ್ನ ಸೀರೆ ಹಿಡಿದು ಹಿಂದೆ ನಿಂತುಬಿಟ್ಟಿದ್ದ. ಅವನಮ್ಮ ಕೈಯಲ್ಲಿ ಹಿಡಿದ ಕೋಲಿನೊಂದಿಗೇ ನಿಂತು ಕಿರಿಚುತ್ತಿದ್ದರು. 'ನೋಡಿ ಟೀಚರೇ, ತೊಟ್ಟಿಲಿಂದ ಮಗುವನ್ನೆ ಉಲ್ಟಾ ಮಾಡ್ಲಿಕ್ಕೆ ಹೊರಟಿದ್ದ. ಇವ್ನತ್ರ ಹೇಗೆ ಹೇಳಿ?'

'ಇಲ್ಲ... ಇಲ್ಲ' ಎಂದು ನನ್ನ ಮನೆಯೊಳಗೆ